**ಮೂ.ದಾ.ನಂ. 94/2019**

ಪಿ.ಡಬ್ಲ್ಯು 3

(ಇಂದು ದಿನಾಂಕ: **23-06-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ಬಿ.ಡಿ.ಎಸ್. ವಕೀಲರಿಂದಃ**

ನಾನು 1981 ನೇ ಸಾಲಿನಲ್ಲಿ ಹುಟ್ಟಿರುತ್ತೇನೆ. ನಾನು ಹೆಗಡೆ ಗ್ರಾಮದಲ್ಲಿ ಜನಿಸಿರುತ್ತೇನೆ. ಈ ಹಿಂದೆ ನಾನು ಸಲ್ಲಿಸಿದ ಪ್ರಮಾಣೀಕೃತ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಲಕ್ಷ್ಮಿ ಇವರು ನನ್ನ ತಂದೆಯವರ ಅಕ್ಕ. ಲಕ್ಷ್ಮಿ ನನ್ನ ತಂದೆಯ ಅಕ್ಕ ಎಂದು ತೋರಿಸುವುದಕ್ಕೆ ದಾಖಲೆಗಳು ಇರಬಹುದು ಆದರೆ ನನಗೆ ದಾಖಲೆಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನನಗೆ ಮದುವೆ ಆಗಿರುತ್ತದೆ. ನನ್ನ ಗಂಡನ ವಾಸಸ್ಥಳ ಧಾರೇಶ್ವರ ಆಗಿರುತ್ತದೆ. ಪ್ರಸ್ತುತ ನಾನು ಹೆಗಡೆ ಯಲ್ಲಿ ವಾಸ್ತವ್ಯ ಇರುತ್ತೇನೆ. ನಾನು ಹೆಗಡೆ ಗ್ರಾಮದಲ್ಲಿ ವಾಸ್ತವ್ಯ ಇದ್ದ ಬಗ್ಗೆ ಆಧಾರ ಕಾರ್ಡ ನೀಡಿರುತ್ತೇನೆ. ನಾನು ಹೆಗಡೆ ಗ್ರಾಮದ ನಿವಾಸಿ ಅಲ್ಲ ಎಂದರೆ ಸರಿಯಲ್ಲ.

ನಾನು ಸಲ್ಲಿಸಿದ ಪ್ರಮಾಣೀಕೃತ ಪ್ರಮಾಣ ಪತ್ರದಲ್ಲಿ ಬರೆಸಿರುವ ಲಕ್ಷ್ಮಿ ಈಕೆಯ ವಿವಾಹವನ್ನು ನಾನು ನೋಡಿರುವುದಿಲ್ಲ. ಆದರೆ ನಾನು ಆ ಮದುವೆಯಾದ ಸಂಗತಿಗಳ ಬಗ್ಗೆ ಕೇಳಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಎಲ್ಲಿಯೂ ಸಹ ಲಕ್ಷ್ಮೀಯ ಮದುವೆ ಆದ ಬಗ್ಗೆ ಕೇಳಿ ತಿಳಿದುಕೊಂಡಿರುವ ವಿಷಯದ ಬಗ್ಗೆ ಬರೆಸಿರುವುದಿಲ್ಲ. ನನಗೆ ಆ ರೀತಿ ಹೇಳಿದ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆಯಲು ಯಾವುದೇ ತೊಂದರೆ ಇರಲಿಲ್ಲ. ನಾನು ಚಿಕ್ಕ ವಯಸ್ಸಿನವಳಿದ್ದಾಗ ಲಕ್ಷ್ಮಿ ಇವಳು ತನ್ನ ತವರು ಮನೆಯಲ್ಲಿ ಬಂದು ಉಳಿದಿದ್ದರು. ಆಗ ನನಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂಬ ಬಗ್ಗೆ ನನಗೆ ಸ್ಪಷ್ಟವಾಗಿ ತಿಳಿದಿರುವುದಿಲ್ಲ ಅಂದಾಜು 2-3 ವರ್ಷ ವಯಸ್ಸು ಆಗಿರಬಹುದು. ಪ್ರಸ್ತುತ ಲಕ್ಷ್ಮಿ ಇವರು ಜೀವಂತ ಆಗಿರುವುದಿಲ್ಲ. ಅವರು ಎಷ್ಟು

ವರ್ಷಗಳ ಹಿಂದೆ ಮೃತರಾಗಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಅಂದಾಜು 8-9 ವರ್ಷಗಳು ಆಗಿರಬಹುದು. ಲಕ್ಷ್ಮಿ ಇವರು ತನ್ನ ತಾಯಿಯ ಮನೆಗೆ ಮಕ್ಕಳ ಜೊತೆಯಲ್ಲಿ ಯಾವ ಕಾರಣಕ್ಕಾಗಿ ಬಂದಿದ್ದರು ಎಂದು ನನಗೆ ನಿಖರವಾಗಿ ತಿಳಿದಿರುವುದಿಲ್ಲ.

ನಾನು ಬೆಟ್ಟುಳಿ ಗ್ರಾಮಕ್ಕೆ ಯಾವತ್ತೂ ಹೋಗಿರುವುದಿಲ್ಲ. ಗಂಗೆ ಹಾಗೂ ಹೊಸಬಯ್ಯಾ ದಂಪತಿಗಳು ತಮ್ಮ ಮಕ್ಕಳೊಂದಿಗೆ ಉಳಿದು ಬಂದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದ್ರಿ ಪ್ರಕರಣ ಯಾವ ಕಾರಣಕ್ಕಾಗಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಆಸ್ತಿಯ ವಿಚಾರವಾಗಿ ದಾವೆಯನ್ನು ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ದಾವೆ ಹೂಡಿರುವ ವಿಚಾರವನ್ನು ನನಗೆ ವಾದಿಯರು (ಅತ್ತೆ) ತಿಳಿಸಿರುತ್ತಾರೆ.

ನನಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವಂತೆ ನನಗೆ ಸಮನ್ಸ/ನೋಟೀಸ್ಸು ಬಂದ ಕಾರಣ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನನಗೆ ನ್ಯಾಯಾಲಯದಿಂದ ಬಂದ ನೊಟೀಸನಲ್ಲಿ ಅದು ಯಾವ ಪ್ರಕರಣ ಯಾಕಾಗಿ ಎಂದು ಹೇಳುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ ನೊಟೀಸಗೆ ಸಂಬಂಧಪಟ್ಟಂತೆ ತಿಳುವಳಿಕೆ ಇರುವುದಿಲ್ಲ. ನ್ಯಾಯಾಲಯಕ್ಕೆ ಬರಲು ನೊಟೀಸ್ ಬಂದಂತಹ ನಂತರ ನನ್ನ ಅತ್ತೆ ಮಕ್ಕಳು ನನಗೆ ಯಾವುದೇ ವಿಚಾರವನ್ನು ಹೇಳಿರುವುದಿಲ್ಲ.

ನಮ್ಮ ಅತ್ತೆ ಮಕ್ಕಳು ಯಾವ ವಿಚಾರವನ್ನು ಹೇಳಿರುವುದಿಲ್ಲ ಹಾಗೂ ನೊಟೀಸನಲ್ಲಿ ಏನೂ ಇರುವುದಿಲ್ಲ ಹಾಗೂ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುವಂತೆ ನನಗೆ ಯಾರು ಮಾಹಿತಿಯನ್ನು ನೀಡಿದ್ದರು ಎಂದರೆ ಸಾಕ್ಷಿಯು ನನ್ನ ಅತ್ತೆಯ ಮಕ್ಕಳಿಗೆ ಒಂದು ನೆಲೆ ಸಿಗಬೇಕು ಹಾಗೂ ಆಸ್ತಿ ಸಿಗಬೇಕು ಎನ್ನುವ ಉದ್ದೇಶದಿಂದ ನಾನು ನನ್ನ ಪ್ರಮಾಣ ಪತ್ರದಲ್ಲಿ

ನಾನೇ ಹೇಳಿ ಬರೆಸಿರುತ್ತೇನೆ. ಈ ಎಲ್ಲ ವಿಷಯಗಳನ್ನು ಪ್ರಮಾಣ ಪತ್ರದಲ್ಲಿ ಬರೆಸಿದರೆ ಮಾತ್ರ ಆಸ್ತಿಯಲ್ಲಿ ಪಾಲು ಸಿಗುತ್ತದೆ ಎಂದು ಯಾರು ಹೇಳಿದ್ದರು ಎಂದರೆ ಸಾಕ್ಷಿಯು ನಮಗೆ ಯಾರು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಯವರಿಗೆ ಅಕ್ರಮವಾಗಿ ಪಾಲು ಕೊಡಿಸುವ ಸಲುವಾಗಿ ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ